## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031 (1244)
2. ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 17-03-2020.
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

| ಕ್ರಮ. ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ KUIDFC ವತಿಯಿಂದ ಅನುಷ್ಠಾನಗೊಳಸಲಾಗುತ್ತಿರುವ 'ಜಲಶ್ರೀ' ಯೋಜನೆಯಡಿ 24X7 ಸಮಯ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣ ಪ್ರದೇಶಗಳು ಯಾವುವು; ಮತ್ತು ಅವುಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಲಾಗಿರುವ ಆರ್ಥಿಕ ನೆರವು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಕಾರ್ಯಕ್ರಮದಡಿ (ಕ್ವಿಮಿಪ್) ರಾಜ್ಯದ ಆಯ್ದ 8 ಪಟ್ಟಣ/ನಗರ/ ಮಹಾನಗರ ಪಾಲಿಕೆಗಳಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ಕ್ವಿಮಿಪ್ ಕಾರ್ಯಕ್ರಮವನ್ನು 'ಜಲಸಿರಿ' ಎಂದು ಹೆಸರಿಡಲಾಗಿದೆ. ಕ್ವಿಮಿಪ್ ಕಾರ್ಯಕ್ರಮವನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್-1 ರಲ್ಲಿ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ 4 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.<br><br>ಟ್ರಾಂಚ್-2 ರಲ್ಲಿ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ 4 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.<br><br>ಸದರಿ ಕಾರ್ಯಕ್ರಮದಡಿಯಲ್ಲಿ 24X7 ಸಮಯ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣ ಪ್ರದೇಶಗಳು ಮತ್ತು ಅವುಗಳ ಅನುಷ್ಠಾನಕ್ಕೆ ಹಂಚಿಕೆ ಮಾಡಲಾಗಿರುವ ಆರ್ಥಿಕ ನೆರವಿನ/ವೆಚ್ಚದ ವಿವರ ಈ ಕೆಳಗಿನಂತಿದೆ: |

| ಕ್ರ. ಸಂ | ಟ್ರಾಂಚ್ | ನಗರ/ಪಟ್ಟಣ | ಗುತ್ತಿಗೆಯ ಮೊತ್ತ -(ಕಾರ್ಯಾಚರಣೆ & ನಿರ್ವಹಣೆ ಹೊರತು ಪಡಿಸಿ) (ಕೋಟಿಗಳಲ್ಲಿ) |
|---|---|---|---|
| 1 | ಟ್ರಾಂಚ್-1 | ದಾವಣಗೆರೆ | 468.25 |
| 2 | | ಹರಿಹರ | 45.6 |
| 3 | | ಬ್ಯಾಡಗಿ | 28.62 |
| 4 | | ರಾಣೆಬೆನ್ನೂರು | 119.21 |
| 5 | ಟ್ರಾಂಚ್-2 | ಮಂಗಳೂರು | 587.67 |
| 6 | | ಉಡುಪಿ | 102.88 |
| 7 | | ಪುತ್ತೂರು | 71.5 |
| 8 | | ಕುಂದಾಪುರ | 23.10 |

| ಕ್ರಮ. ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಆ) | ಈ ಯೋಜನೆಗೆ ಸೇರ್ಪಡೆಯಾಗಿರುವ ಪಟ್ಟಣ ಪ್ರದೇಶಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ; (ವಿವರ ಒದಗಿಸುವುದು) | ಸದರಿ ಯೋಜನೆಯನ್ನು ಸಮಗ್ರ ನೀರು ನಿರ್ವಹಣೆ ಆಧಾರದ ಅನುಸಾರ ಅನುಷ್ಠಾನಗೊಳಸುತ್ತಿದ್ದು, ಈ ಹಿನ್ನಲೆಯಲ್ಲಿ ಟ್ರಾಂಚ್-1 ರಲ್ಲಿ 4ನಗರ/ಪಟ್ಟಣಗಳನ್ನು ತುಂಗಭದ್ರಾ ಜಲಾಯನಯನ ಪ್ರದೇಶದ ನಗರಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು, ಬ್ಯಾಡಗಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. |

| | | |
|---|---|---|
| | | ಅದೇ ರೀತಿ ಕರಾವಳಿ ಪ್ರದೇಶದ ನಗರಗಳಾದ ಮಂಗಳೂರು, ಪುತ್ತೂರು, ಉಡುಪಿ, ಕುಂದಾಪುರಗಳನ್ನು ಆಯ್ಕೆ ಮಾಡಲಾಗಿದೆ. (ಒಂದು ಮಹಾನಗರಪಾಲಿಕೆ, ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಒಂದು ನಗರಸಭೆ, ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯ ಒಂದು ನಗರಸಭೆ, ಒಂದು ಪುರಸಭೆ ಮಾದರಿಯಲ್ಲಿ) ಸರ್ಕಾರದ ಮಟ್ಟದಲ್ಲಿ ಚರ್ಚಿತವಾಗಿ ಅನುಮೋದನೆಗೊಂಡಿರುತ್ತದೆ. |
| ಇ) | ಈ ಯೋಜನೆಯಡಿ ಆಯ್ಕೆ ಆಗಿರುವ ಪಟ್ಟಣ ಪ್ರದೇಶಗಳಲ್ಲಿ ಕಾಮಗಾರಿಗಳ ಅನುಷ್ಠಾನ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಈ ಯೋಜನೆಯಡಿ ಆಯ್ಕೆ ಆಗಿರುವ ಪಟ್ಟಣ ಪ್ರದೇಶಗಳಲ್ಲಿ ಕಾಮಗಾರಿಗಳ ಅನುಷ್ಠಾನದ ಸಂಪೂರ್ಣ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಈ) | ಈ ಯೋಜನೆಯಡಿ ಆಯ್ಕೆ ಮಾಡಿರುವ ಹಲವಾರು ಪಟ್ಟಣ ಪ್ರದೇಶಗಳು ಕೇಂದ್ರ ಸರ್ಕಾರದ 'ಅಮೃತ್' ಯೋಜನೆಯಡಿ ಕುಡಿಯುವ ನೀರಿನ ವರ್ದನೆ ಕಾರ್ಯಕ್ರಮದಲ್ಲಿ ಕೈಗೊಂಡಿದ್ದು ಈ ಪಟ್ಟಣಗಳನ್ನು ಮತ್ತೊಮ್ಮೆ 'ಜಲಶ್ರೀ' ಯೋಜನೆಯಡಿ ಸೇರಿಸುವುದು ಸರಿಯೇ: (ಸಂಪೂರ್ಣ ಮಾಹಿತಿ ನೀಡುವುದು) | ಏಡಿಬಿ ನೆರವಿನ ಜಲಸಿರಿ ಕಾರ್ಯಕ್ರಮದಲ್ಲಿ ಆಯ್ಕೆ ಮಾಡಿರುವ ನಗರ/ಪಟ್ಟಣಗಳಲ್ಲಿ ಕುಡಿಯುವ ನೀರು ಯೋಜನೆಗೆ ಕೊರತೆಯಾಗುವ ಹಣವನ್ನು ಅಮೃತ್ ಕಾರ್ಯಕ್ರಮದಡಿಯಲ್ಲಿ ಪಡೆಯಲಾಗಿದ್ದು, ಅಮೃತ್ ಸಹಯೋಗದೊಂದಿಗೆ ಜಲಸಿರಿ ಯೋಜನೆಯಡಿ ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಟಾನಗೊಳಸಲಾಗುತ್ತಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ:<br><br>1. ದಾವಣಗೆರೆ ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.677.96 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.174.96 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.<br><br>2. ರಾಣೆಬೆನ್ನೂರು ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.139.21 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.96.36 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.<br><br>3. ರಾಣೆಬೆನ್ನೂರು ನಗರದಲ್ಲಿ ಗಂಗಾಜಲ ದೊಡ್ಡ ಕೆರೆಯ ಪುನರುಜ್ಜೀವನ ಕಾಮಗಾರಿಯನ್ನು ರೂ.29.83 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.19.87 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.<br><br>4. ಮಂಗಳೂರಿನಲ್ಲಿ ಸಗಟು ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯನ್ನು ರೂ.35.51 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.32.51 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.<br><br>5. ಉಡುಪಿ ನಗರದಲ್ಲಿ ಸಗಟು ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯನ್ನು ರೂ.119.51 ಕೋಟಿಗಳಲ್ಲಿ ಅನುಷ್ಟಾನಗೊಳಸಲಾಗುತ್ತಿದ್ದು ಇದರಲ್ಲಿ ರೂ.122.50 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ. |

| | | |
|---|---|---|
| | | 6. ಉಡುಪಿ ನಗರದಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು (8 ವರ್ಷಗಳ ನಿರ್ವಹಣೆಯೊಂದಿಗೆ) ರೂ.172.98 ಕೋಟಿಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದ್ದು, ಇದರಲ್ಲಿ ರೂ.9.03 ಕೋಟಿಗಳನ್ನು ಅಮೃತ್ ಯೋಜನೆಯಿಂದ ಒದಗಿಸಲಾಗಿದೆ.<br><br>ಸದರಿ ನಗರಗಳಲ್ಲಿ ಶೇ 100 ರಷ್ಟು ನಳ ಸಂಪರ್ಕಗಳೊಂದಿಗೆ 24/7 ಕುಡಿಯುವ ನೀರು ಸರಬರಾಜು ಒದಗಿಸಲು ಉದ್ದೇಶಿಸಲಾಗಿದ್ದು, 30 ವರ್ಷದ ನೀರಿನ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಗೊಳಸಲಾಗಿದ್ದು, ಜಲಸಿರಿ ಯೋಜನೆಯಡಿ ಅನುಷ್ಠಾನಗೊಳಸುತ್ತಿರುವ ಕಾಮಗಾರಿಗಳಗೆ ಕೊರತೆಯಾಗುವ ಹಣವನ್ನು ಸರಿದೂಗಿಸಲು ಅಮೃತ್ ಯೋಜನೆಯಿಂದ ಒದಗಿಸಿದೆ. |
| ಉ) | ಮುಂದುವರೆದ 'ಜಲಶ್ರೀ' ಯೋಜನೆ – ಯಡಿಯಲ್ಲಿ ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಹಾಗೂ ಭೂಮಿಯ ನೀರಿನ ಮಟ್ಟ ಕರಗುತ್ತಿರುವ ಜಿಲ್ಲೆಗಳಲ್ಲಿನ ಪಟ್ಟಣಗಳನ್ನು ಸೇರಿಸಲು ಸರ್ಕಾರ ಚಿಂತಿಸಿದಿಯೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು? | ಜಲಸಿರಿ ಯೋಜನೆಯು ಎಡಿಬಿ ನೆರವಿನ ಕಾರ್ಯಕ್ರಮವಾಗಿದ್ದು, ಆಯ್ದ 8 ನಗರಗಳಲ್ಲಿ ಕಾಮಗಾರಿಗಳನ್ನು ಅನುಷ್ಟಾನಗೊಳಸಲಾಗುತ್ತಿದೆ.<br><br>ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಹಾಗೂ ಭೂಮಿಯ ನೀರಿನ ಮಟ್ಟ ಕರಗುತ್ತಿರುವ ಜಿಲ್ಲೆಗಳಲ್ಲಿನ ಪಟ್ಟಣಗಳನ್ನು ಸೇರಿಸಲು ಪ್ರಸ್ತುತ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

ಕಡತ ಸಂಖ್ಯೆ: ನಅಇ 87 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.